Literacy for a Billion

Movie: Undoo Hoda Kondoo Hoda
Year: 1992

Song: Nakka Haage Natisa Beda
Lyricist: K S Narasimhaswamy

ನಕ್ಕ ಹಾಗೆ ನಟಿಸ ಬೇಡ
ನಕ್ಕುಬಿಡು
ಬೆಳಕಾಗಲಿ ತಂಪಾಗಲಿ
ನಿನ್ನೊಲವಿನ ಒಳಮನೆ

ನಿನ್ನೊಲವಿನ ತೆರೆಗಳಲ್ಲಿ
ಬೆಳದಿಂಗಳು ಹೊರಳಲಿ
ನಿನ ಹಸಿರು ಕನಸಿನಲ್ಲಿ
ಮಲ್ಲಿಗೆ ಹೂವು ಅರಳಲಿ

ಬಾನ ತುಂಬ ತಾರೆ ಮಿನುಗಿ
ನಿನಗೆ ಶುಭವ ಕೋರಲಿ

ಗೋಧೂಳಿಯ ಹಾದಿಯಲ್ಲಿ
ಬೆಳ್ಳಿ ಹಕ್ಕಿ ಹಾಡಲಿ

ಬೆಟ್ಟದಾಚೆ ಒಂದು ಬಯಲು
ಅದರ ತುಂಬ ಹಸುಗಳು
ನಿನ ದನಿಗೆ ಕೊರಲನೆತ್ತಿ
ಕುಣಿವ ಕಂದು ಕರುಗಳು

ಬಿದಿರ ಮೆಳೆಯ ಬಂಗಾರ
ಸೀಮೆಯಾಚೆಗೇನಿದೇ
ಕೊರಳದನಿಯ ಉಂಗುರಗಳ
ಸಂಜೆಹಾಡು ಹಬ್ಬಿದೆ

*Disclaimer: PlanetRead does not own these lyrics and is not using them for any commercial purpose. For over 20 years, PlanetRead has been subtitling Bollywood songs for mass literacy. These lyrics are being offered as part of PlanetRead's literacy development initiative.*

*PlanetRead is a tax-exempt, not-for-profit: 501(c) (3) in the United States and 80(G) in India.*